ಕರ್ನಾಟಕ ಸರ್ಕಾರ

# ಉಪತಹಶೀಲ್ದಾರರವರ ನ್ಯಾಯಾಲಯ, ನಾಡ ಕಾರ್ಯಾಲಯ
# ಹಂಪಸಾಗರ,

**ಸಂ.ಕಂ.ಪಹಣಿ/ವಿವಾದ/ 05/2016-17** ದಿ- 5.5.2016

---

**ಉಪಸ್ಥಿತರು : ಶ್ರೀ ಎ.ಚಂದ್ರಾನಾಯ್ಕ ಉಪತಹಶೀಲ್ದಾರರು, ನಾಡ ಕಛೇರಿ, ಹಂಪಸಾಗರ**

---

| ವಾದಿಗಳು | ಪ್ರತಿವಾದಿಗಳು |
|---|---|
| 1) ಶ್ರೀ ಹರಿಜನ ಮೈಲಪ್ಪ<br>ತಾಯಿ ದಿ॥ ಗೋಣಿ ಬಸವ್ವ<br>2) ಶ್ರೀಮತಿ ಲಕ್ಷ್ಮವ್ವ<br>ಗಂಡ ದಿ॥ ಹನ್ಮಂತಪ್ಪ<br>3) ಹರಿಜನ ಸಣ್ಣ ದುರುಗವ್ವ<br>ತಾಯಿ ದೊಡ್ಡ ದುರುಗವ್ವ<br>ಗ್ರಾಮ ಹಂಪಸಾಗರ. | ಕಂದಾಯ ನಿರೀಕ್ಷಕರು<br>ಹಂಪಸಾಗರ. |

---

ವಿಷಯ : - **ಹಗರಿಬೊಮ್ಮನಹಳ್ಳಿ ತಾಲೂಕು ಹಂಪಸಾಗರ ಹೋಬಳಿ, ಹಂಪಸಾಗರ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 224/ಕೆ ವಿಸ್ತೀರ್ಣ 4-30 ಎಕರೆ ಜಮೀನು ನೊಂದಾಯಿತ ಪಾಲು ವಿಭಾಗದ ಪ್ರಕಾರ ಭೂಮಿ ಕೇಂದ್ರದಿಂದ ಬಂದ ನಮೂನೆ 12 ಹಾಗೂ ನೋಟೀಸು ನಮೂನೆ 21 ರಲ್ಲಿನ ವ್ಯತ್ಯಾಸ ಕುರಿತು-ವಿಚಾರಣೆ.**

---

**ಪೀಠಿಕೆ :-**

ಹಗರಿಬೊಮ್ಮನಹಳ್ಳಿ ತಾಲೂಕು, ಹಂಪಸಾಗರ ಹೋಬಳಿ, ಹಂಪಸಾಗರ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 224/ಕೆ, ವಿಸ್ತೀರ್ಣ 4-30 ಎಕರೆ ಜಮೀನು ನೊಂದಾಯಿತ ಪಾಲು ವಿಭಾಗ ದಸ್ತಾವೇಜು ಸಂಖ್ಯೆ ಹೆಚ್.ಬಿ.ಹೆಚ್-1-03773/2015-16 ದಿನಾಂಕ: 28-01-2016 ರಂದು ವಾದಿಗಳು 1 ರಿಂದ 3 ಇವರು ಪಾಲುವಿಭಾಗ ಹೊಂದಿರುತ್ತಾರೆ. ಪಾಲುವಿಭಾಗದ ಪ್ರಕಾರ ದಸ್ತಾವೇಜು ತಾಲೂಕಾ ಭೂಮಿಕೇಂದ್ರದಲ್ಲಿ ವಹಿವಾಟು ಸಂಖ್ಯೆ 100 ಹಕ್ಕು ಬದಲಾವಣೆ ಸಂಖ್ಯೆ ಹೆಚ್-52/2015-16 ರಂತೆ ವಹಿವಾಟು ನಡೆದು ಮುಂದಿನ ಹಕ್ಕು ಬದಲಾವಣೆ ಕ್ರಮಕ್ಕಾಗಿ ನಮೂನೆ 12 ಹಾಗೂ ನೋಟೀಸು ನಮೂನೆ 21ನ್ನು ಕಂದಾಯ ನಿರೀಕ್ಷಕರು ಹಂಪಸಾಗರ ಇವರಿಗೆ ರವಾನಿಸಲಾಗಿ ಸದರಿ ನೋಟೀಸುಗಳನ್ನು ಗ್ರಾಮ ಲೆಕ್ಕಾಧಿಕಾರಿ ಹಂಪಸಾಗರ ಇವರು ಪ್ರಚುರಪಡಿಸಿರುತ್ತಾರೆ. ಹಾಗೂ ಗ್ರಾಮ ಲೆಕ್ಕಾಧಿಕಾರಿ ಹಂಪಸಾಗರ ಇವರು ನಮೂನೆ 12 ಹಾಗೂ ನೋಟೀಸು ನಮೂನೆ 21ನ್ನು ಪರಿಶೀಲಿಸುತ್ತಾ ಸದರಿ ನಮೂನೆ 12 ಹಾಗೂ ನೋಟೀಸು ನಮೂನೆ 21ರಲ್ಲಿ ಪಾಲುವಿಭಾಗ ಪತ್ರಕ್ಕೂ ಹಾಗೂ ಇವುಗಳಿಗೆ ವ್ಯತ್ಯಾಸವಾಗಿರುವ ಬಗ್ಗೆ ವರದಿ ಮಾಡಿರುತ್ತಾರೆ. ಗ್ರಾಮ ಲೆಕ್ಕಾಧಿಕಾರಿಗಳ ವರದಿ ಹಾಗೂ ದಾಖಲೆಗಳನ್ನು ಪರಿಶೀಲಿಸುತ್ತಾ

O/c 23/05/16

ಕಂದಾಯ ನಿರೀಕ್ಷಕರು ಇದನ್ನು ಮುಂದಿನ ವಿಚಾರಣೆಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಹಾಗೂ ವಹಿವಾಟು ಕುರಿತು ಶ್ರೀ ಹರಿಜನ ಮೈಲಪ್ಪ ತಾಯಿ ಗೋಣಿ ಬಸವ್ವ ಇವರು ತಕರಾರು ಸಲ್ಲಿಸಿರುತ್ತಾರೆ. ಕಂದಾಯ ನಿರೀಕ್ಷಕರ ವರದಿ ಹಾಗೂ ತಕರಾರುದಾರರು ಸಲ್ಲಿಸಿರುವ ವಿಷಯ ಕುರಿತು ಈ ನ್ಯಾಯಾಲಯದಲ್ಲಿ ಪ್ರಕರಣವನ್ನು ಈ ಮೇಲಿನ ಸಂಖ್ಯೆಯಂತೆ ದಾಖಲಿಸಿಕೊಂಡು ದಿನಾಂಕ: 05-05-2016 ರಂದು ವಿಚಾರಣೆ ನಡೆಸಲಾಯಿತು. ವಿಚಾರಣೆಯಲ್ಲಿ ವಾದಿಗಳು 1 ರಿಂದ 3 ರವರೆಗಿನ ಪಾಲುವಿಭಾಗದಾರರು ಹಾಜರಿರುತ್ತಾರೆ. ಹಾಗೂ ಪಾಲು ವಿಭಾಗ ಸರಿಪಡಿಸುತ್ತಾ ಹಕ್ಕು ಬದಲಾವಣೆ ಆದೇಶಿಸಬೇಕೆಂದು ಹೇಳಿಕೆ ಸಹ ನೀಡಿರುತ್ತದೆ.

ದಾಖಲೆಗಳನ್ನು ಪರಿಶೀಲಿಸಲಾಗಿ ಪಾಲುವಿಭಾಗ ಪತ್ರಸಂಖ್ಯೆ ಹೆಚ್.ಬಿ.ಹೆಚ್. 01-03773/2015-16/ದಿನಾಂಕ: 28-01/2016 ರಂತೆ ನೊಂದಣಿ ವಿಭಾಗ ಪತ್ರ ಹೊಂದಿರುತ್ತದೆ ಹಾಗೂ ನೊಂದಣಿ ಪೂರ್ವದಲ್ಲಿ ವಾದಿಗಳು ಸರ್ವೆ ಶಾಖೆಯಿಂದ 11-ಇ ನಕ್ಷೆ ಸಂಖ್ಯೆ 12020415412252001 ರಂತೆ ಹೊಂದಿರುತ್ತಾರೆ. ಪಾಲುವಿಭಾಗ ನೊಂದಣಿಯ ಕ್ರಮಬದ್ಧವಾಗಿ ನೊಂದಣಿಯಾಗಿರುವುದು ಕಂಡು ಬಂದಿರುತ್ತದೆ. ಆದರೆ ತಾಲೂಕು ಭೂಮಿಕೇಂದ್ರದಲ್ಲಿ ವಹಿವಾಟು ನಡೆಯುವಾಗ ಕೈತಪ್ಪಿ ಅದಲು ಬದಲು ಆಗಿರುವುದು ಕಂಡು ಬಂದಿದೆ. ಆದ್ದರಿಂದ ದಾಖಲೆಗಳ ಆಧಾರಿತ ಈ ಕೆಳಕಂಡ

## ಆದೇಶ

ಹಗರಿಬೊಮ್ಮನಹಳ್ಳಿ ತಾಲೂಕು ಹಂಪಸಾಗರ ಹೋಬಳಿ, ಹಂಪಸಾಗರ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 224/ಕೆ ವಿಸ್ತೀರ್ಣ 4-30 ಎಕರೆ ಜಮೀನನ್ನು ಕ್ರಮವಾಗಿ ಸ.ನಂ. 224/ಕೆ ಪೈಕಿ ವಿಸ್ತೀರ್ಣ 2-15 ಎಕರೆ 1) ಹರಿಜನ ಮೈಲಪ್ಪ ತಾಯಿ ದಿ॥ ಗೋಣಿಬಸವ್ವ
2) ಶ್ರೀಮತಿ ಹರಿಜನ ಲಕ್ಷ್ಮವ್ವ ಗಂಡ ದಿ॥ ಹನ್ಮಂತಪ್ಪ
ಈ ಈರ್ವರ ಹೆಸರಿನಲ್ಲಿ ಜಂಟಿಯಾಗಿ

---

ಹಾಗೂ ಸ.ನಂ. 224/ಕೆ ಪೈಕಿ ವಿಸ್ತೀರ್ಣ 2-15 ಎಕರೆ 1) ಶ್ರೀಮತಿ ಹರಿಜನ ಸಣ್ಣ ದುರುಗವ್ವ
ತಾಯಿ ದೊಡ್ಡ ದುರುಗವ್ವ

---

ಈ ರೀತಿಯಾಗಿ ಹಕ್ಕು ಬದಲಾವಣೆ ಮಂಜೂರು ಮಾಡಿ ಆದೇಶಿಸಿದೆ. ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಉಪತಹಶೀಲ್ದಾರರು
ನಾಡಕಛೇರಿ, ಹಂಪಸಾಗರ

ಪ್ರತಿಯನ್ನು :-

1) ವಾದಿಗಳು 1 ರಿಂದ 3 ರವರು
2) ತಾಲೂಕು ಭೂಮಿ ಕೇಂದ್ರಕ್ಕೆ
3) ಹೆಚ್ಚುವರಿ ಪ್ರತಿ ಕಡತಕ್ಕೆ